**ಓ ಎಸ್ ನಂಃ 325-14**
**ಡಿ ಡಬ್ಲ್ಯೂ ಃ 2**

**ದಿಃ 19.04.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಸಿ.ಕೆ ವಕೀಲರಿಂದ**

35. ನಟರಾಜು (ಪ್ರತಿವಾದಿ 4) ರವರು ನನ್ನ ಸಂಬಂಧಿಕರಲ್ಲ. ಅವರು ವಿರೂಪಾಪುರದ ನಿವಾಸಿ. ಅವರು ನನ್ನ ಸ್ನೇಹಿತರು. ವಾದಿ ದಾವಾ ಸ್ವತ್ತಿನಲ್ಲಿ ಭಾಗದ ಹಕ್ಕು ಇದೆ ಭಾಗ ಕೊಡಿ ಎಂದು ಕ್ರಯಪತ್ರ ಬರೆದುಕೊಡುವ ಮುಂಚೆ ಕೇಳಿಲ್ಲ. ದಿಃ22.10.2010 ರ ಕ್ರಯಪತ್ರ ಆಗುವ ಮುಂಚೆ ಮೃತ 4 ನೇ ಪ್ರತಿವಾದಿ ಜೊತೆ ರೂ.38 ಲಕ್ಷಕ್ಕೆ ಕ್ರಯದ ನಿಷ್ಕರ್ಶೆ ಆಗಿತ್ತು. ದಾವಾ ಸ್ವತ್ತು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿರುವುದರಿಂದ ಅದರ ಸುತ್ತ ಮುತ್ತಲಿನ ಸ್ವತ್ತುಗಳು ಅಭಿವೃದ್ಧಿ ಆಗಿದೆ ಅಂದರೆ ಸರಿ. ಪೆಟ್ರೋಲ್ ಬಂಕ್ ಹಾಗೂ ವಾಣಿಜ್ಯ ಕಟ್ಟಡಗಳು ಅಲ್ಲಿ ಆಗಿವೆ ಅಂದರೆ ಸಾಕ್ಷಿ ಈಗ ಆಗಿವೆ ಎಂದು ನುಡಿಯುತ್ತಾರೆ. ಇವತ್ತು ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ 5 ರಿಂದ 6 ಕೋಟಿ ಇದೆ ಅಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ.

36. 2010 ರಲ್ಲಿ ದಾವಾ ಸ್ವತ್ತಿನ ಬೆಲೆ 2 ರಿಂದ 3 ಕೋಟಿ ಇತ್ತು ಅಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಯವರು ನಮಗೆ ಸಹಾಯ ಮಾಡಿರುವುದರಿಂದ ದಾವಾ ಸ್ವತ್ತಿಗೆ ಅಷ್ಟು ಬೆಲೆ ಇದ್ದರೂ ಕೂಡಾ ರೂ. 38 ಲಕ್ಷಕ್ಕೆ ಮಾರಾಟ ಮಾಡಿರುತ್ತೇನೆ. ಆ ಕ್ರಯದ ಮಾತುಕತೆ ಸಂದರ್ಭದಲ್ಲಿ ಯಾರೆಲ್ಲಾ ಇದ್ದರು ಎಂದು ನನಗೆ ಗೊತ್ತಿಲ್ಲ. ಆ ಮಾತುಕತೆ ನಂತರ ಕ್ರಯದ ಕರಾರು ಪತ್ರ ಬರೆಸಿಲ್ಲ ಹಾಗೂ ಯಾವುದೇ ಮುಂಗಡ ಹಣ ಪಡೆದುಕೊಂಡಿಲ್ಲ. ಆ ಮಾತುಕತೆ ಕ್ರಯಪತ್ರ ನೋಂದಣಿಗಿಂತ ಎರಡು ದಿನ ಮುಂಚೆ ಆಗಿರುತ್ತದೆ. 4 ನೇ ಪ್ರತಿವಾದಿ ಅವರು ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು. ಅವರು ಆ ಕ್ರಯಪತ್ರ ನೋಂದಣಿ ಆಗುವ ಮುಂಚೆ ಹಾಗೂ ನೋಂದಣಿ ದಿನ ನನಗೆ ರೂ. 38 ಲಕ್ಷ ಪಾವತಿಸಿಲ್ಲ. ಆ ಕ್ರಯಪತ್ರ ತಯಾರಿಸಲು ನಾನು ಮಾಹಿತಿ ಕೊಟ್ಟಿರುವುದಿಲ್ಲ. ಆ ಕ್ರಯಪತ್ರದಲ್ಲಿ ಏನು ಬರೆದಿತ್ತು ಎಂದು ನಾನು ಓದಿ ತಿಳಿದುಕೊಂಡಿಲ್ಲ.

37. 2 ನೇ ಪ್ರತಿವಾದಿ ಆ ಕ್ರಯಪತ್ರವನ್ನು ಓದಿ ತಿಳಿದುಕೊಂಡಿದ್ದಾರಾ ಅಂದರೆ ಸಾಕ್ಷಿ ಯಾರು ಓದಿ ತಿಳಿದುಕೊಂಡಿರಲಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ಆ ಕ್ರಯಪತ್ರದಲ್ಲಿ ಏನು ಅಂಶಗಳು ಸೇರ್ಪಡೆಯಾಗಿವೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಆ ಕ್ರಯಪತ್ರ ಆಗುವ ದಿನ ನಾನು, 2 ನೇ

ಪ್ರತಿವಾದಿ, ಮೃತ 4ನೇ ಪ್ರತಿವಾದಿ ಹಾಗೂ ನನ್ನ ಹೆಂಡತಿ ಹಾಜರಿದ್ದೆವು. ಆ ಕ್ರಯಪತ್ರಕ್ಕೆ ಮಂಜುನಾಥ್ ಮತ್ತು ಲೋಕೇಶ್ ರವರು ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ನನ್ನ ಹೆಂಡತಿ ಅದಕ್ಕೆ ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಆ ಕ್ರಯಪತ್ರಕ್ಕೆ ಎಲ್ಲರೂ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಉಪ ನೋಂದಣಾಧಿಕಾರಿ ಎದುರು ಸಹಿ ಮಾಡಿರುತ್ತೇವೆ. ಉಪ ನೋಂದಣಾಧಿಕಾರಿ ಕ್ರಯದ ಮೊಬಲಗು ಸಂದಾಯವಾಗಿದೆಯಾ ಎಂದು ಕೇಳಿದರು. ಆಗ ನಾವು ನೋಂದಣಿ ಆದ ನಂತರ ಕ್ರಯದ ಮೊಬಲಗನ್ನು ಪಾವತಿಸುತ್ತೇನೆಂದು ಹೇಳಿದ್ದಾರೆ ಎಂದು ಹೇಳಿರುತ್ತೇವೆ. ಆ ಕ್ರಯಪತ್ರದಲ್ಲಿ ಎಷ್ಟು ಮೊಬಲಗು ಎಂದು ನಮೂದಿಸಿದ್ದಾರೆಂದು ನನಗೆ ಗೊತ್ತಿಲ್ಲ. ರೂ. 22 ಲಕ್ಷದ 73 ಸಾವಿರ ಎಂದು ನಮೂದಿಸಿದ್ದಾರೆಂದರೆ ನನಗೆ ಗೊತ್ತಿಲ್ಲ.

38. ಆ ಕ್ರಯಪತ್ರ ನೋಂದಣಿ ಆದ ನಂತರ ಕೂಡಾ ಅವರು ಆ ಮೊಬಲಗು ನಮಗೆ ಪಾವತಿಸಿಲ್ಲ. ಆ ಕ್ರಯಪತ್ರದ ಪ್ರಕಾರ ಸ್ವಾಧೀನ ಅವರಿಗೆ ಬಿಟ್ಟುಕೊಟ್ಟಿರುವುದಿಲ್ಲ. ನಾನು ಆ ಕ್ರಯದ ಮೊಬಲಗನ್ನು ಪಾವತಿಸಿಲ್ಲ ಎಂದು 4ನೇ ಪ್ರತಿವಾದಿಗೆ ಪಾವತಿಸಿ ಎಂದು ಕೋರಿ ನೋಟೀಸು ಕೊಟ್ಟಿರುವುದಿಲ್ಲ. ದಾವಾ 1ನೇ ಸ್ವತ್ತಿನ ಪೂರ್ವಕ್ಕೆ ಈಗ ರಸ್ತೆ ಇದೆ ಅಂದರೆ ಸರಿ. ನಾವು ಕ್ರಯಪತ್ರವನ್ನು ಕ್ರಯದ ಮೊಬಲಗು ಪಾವತಿಸದೇ ಮೋಸದಿಂದ ಬರೆಸಿಕೊಂಡಿದ್ದೀರಿ ಹಾಗೂ ಆ ಕ್ರಯಪತ್ರವನ್ನು ರದ್ದು ಮಾಡಿ ಎಂದು ಕೋರಿ ದಾವೆ ಸಲ್ಲಿಸಿರುವುದಿಲ್ಲ. ಆ ಕ್ರಯಪತ್ರದ ಆಧಾರದಲ್ಲಿ ಮೃತ 4ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುತ್ತದೆ. ಕಮಲಮ್ಮನಿಗೆ ದಾವಾ 1ನೇ ಸ್ವತ್ತು ದಕ್ಕಬಾರದೆಂದು ಮೃತ 4ನೇ ಪ್ರತಿವಾದಿ ಹೆಸರಿಗೆ ನಾಮಕಾವಸ್ತೆಯ ಆ ಕ್ರಯಪತ್ರವನ್ನು ಬರೆದುಕೊಟ್ಟಿದ್ದೇವೆಂದರೆ ಸರಿ.

39. ಆ ಕ್ರಯಪತ್ರ ಬರೆದುಕೊಡುವ ಸಂದರ್ಭದಲ್ಲಿ ನನ್ನ ಹೆಸರಿನಲ್ಲಿ ಖಾತೆ ಬಿಟ್ಟರೆ ಮರಾಟ ಮಾಡುವ ಸಂಪೂರ್ಣ ಮಾಲೀಕತ್ವ ಇರಲಿಲ್ಲ ಅಂದರೆ ಸರಿ. ನನ್ನ ಕೋರಿಕೆಯ ಮೇರೆಗೆ ಆ ಕ್ರಯಪತ್ರವನ್ನು ನೋಂದಣಿ ಮಾಡಿಸಿದ್ದಾರೆಂದರೆ ಸರಿ. ಆದ್ದರಿಂದ ಮೃತ 4ನೇ ಪ್ರತಿವಾದಿಗೆ ದಾವಾ 1ನೇ ಸ್ವತ್ತಿನ ಮಾಲೀಕತ್ವ ವರ್ಗಾವಣೆ ಆಗಿಲ್ಲ ಅಂದರೆ ಸರಿ. ವಾದಿ ದಾವಾ 1ನೇ ಸ್ವತ್ತಿನ ಮಾಲೀಕರಾಗಿರುವುದರಿಂದ ಮೃತ 4ನೇ ಪ್ರತಿವಾದಿಗೆ ಆ ಕ್ರಯಪತ್ರದ ಆಧಾರದಲ್ಲಿ ಯಾವುದೇ ಮಾಲೀಕತ್ವ ಪ್ರಾಪ್ತವಾಗಿಲ್ಲ ಅಂದರೆ ಸರಿ. ಆದ್ದರಿಂದ ಆ ಕ್ರಯಪತ್ರ ವಜಾ ಆಗುವುದಕ್ಕೆ ನನ್ನದೇನೂ ಆಕ್ಷೇಪಣೆ ಇರುವುದಿಲ್ಲ ಅಂದರೆ ಸರಿ.

40. ಒ ಎಸ್ 152/2004ರ ಪ್ರಕಾರ ನಾನು ವಾದಿ ವಿರುದ್ಧ ಭಾಗ ಕೋರಿ ದಾವೆ ಸಲ್ಲಿಸಿದ್ದೆ. ವಾದಿ ಆ ದಾವೆಯನ್ನು ನಡೆಸಿರುವುದರಿಂದ ದಿ:06.12.2010ರಂದು ಆ ದಾವೆ ವಜಾ ಆಗಿದೆ ಅಂದರೆ ಸರಿ. ಅದರ ವಿರುದ್ಧ ನಾವು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಅಂದರೆ ಸರಿ. ಎಸ್.ರಾಜು ಎಂಬುವರು ವಾದಿ ವಿರುದ್ಧ ಒ ಎಸ್ 80/2005ರಂತೆ ಸಲ್ಲಿಸಿದ ದಾವೆ ಕೂಡಾ ವಜಾ ಆಗಿದೆ ಅಂದರೆ ನನಗೆ ಗೊತ್ತಿಲ್ಲ. ಒ ಎಸ್ 163/2005 ಎಂಬ ದಾವೆಯನ್ನು ಯಾರು ಸಲ್ಲಿಸಿದ್ದು ಎಂದು ನನಗೆ ಗೊತ್ತಿಲ್ಲ.

ಎ.ಎನ್.ಮಂಜುನಾಥ್ ರವರು ನನ್ನ ಸ್ನೇಹಿತರು. ಅವರಿಗೂ ನಮಗೂ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವಿವಾದ ಇರಲಿಲ್ಲ. ವಾದಿ ಮತ್ತು ಎ.ಎನ್.ಮಂಜುನಾಥ್ ರವರ ನಡುವೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ವಿವಾದ ಇತ್ತು. ಅವರ ನಡುವೆ ಇದ್ದ ವಿವಾದ ಏನು ಎಂದು ನನಗೆ ಗೊತ್ತಿಲ್ಲ.

41. ಪ್ರತಿವಾದಿ 14 ರವರ ಪರಿಚಯ ಇದೆ. ಅವರು ನನ್ನ ಊರಿನ ಪಕ್ಕದವರು. ಸಿದ್ದಲಿಂಗಯ್ಯರವರು ನನ್ನ ಪರಿಚಿತರಾಗಿದ್ದು ಅವರು ಪಕ್ಕದ ಸಾಹುಕಾರಪಾಳ್ಯದ ಊರಿನವರು. 14ನೇ ಪ್ರತಿವಾದಿ ಬುಡ್ಡನಪಾಳ್ಯದವರು. ಎನ್.ಹರೀಶ್ ಪರಿಚಿತರು. ಅವರು ಆರ್ ಟಿ ನಗರದ ನಿವಾಸಿ ಆಗಿದ್ದು, ನನ್ನ ಸ್ನೇಹಿತನಾದ ನವಾಜ್ ಮೂಲಕ ಅವರು ಪರಿಚಯ ಆದರು. ಪ್ರತಿವಾದಿ 14 ಮತ್ತು ಸದರಿ ಎನ್.ಹರೀಶ್ ಹಾಗೂ ನಮ್ಮ ನಡುವೆ ವ್ಯವಹಾರ ಇತ್ತಾ ಅಂದರೆ ಸಾಕ್ಷಿ 14ನೇ ಪ್ರತಿವಾದಿ ನನ್ನ ಮತ್ತು ವಾದಿ ನಡುವೆ ರಾಜಿ ಇತ್ಯರ್ಥ ಮಾಡಲು ಖಾಲಿ ಪೇಪರ್ ಗಳಿಗೆ ನನ್ನ ಹಾಗೂ ನನ್ನ ತಾಯಿಯ ಸಹಿ ಮಾಡಿಸಿರುತ್ತಾರೆ. ಎನ್.ಹರೀಶ್ ರವರು ಕೂಡಾ ನನ್ನ, ನಾಗರಾಜು ಮತ್ತು ನರಸಿಂಹೇಗೌಡರ ಸಹಿಯನ್ನು ಖಾಲಿ ಪೇಪರ್ ಗೆ ಪಡೆದಿರುತ್ತಾರೆ. ಯಾಕೆ ಎಂದು ಗೊತ್ತಿಲ್ಲ. ಅವರು ಕೂಡಾ ವಾದಿ ಮತ್ತು ನಮ್ಮ ನಡುವೆ ಇತ್ಯರ್ಥ ಮಾಡಿಕೊಡುತ್ತೇವೆ ಎಂದು ಆ ಸಹಿಗಳನ್ನು ಪಡೆದಿರುವುದು ಅಂದರೆ ಸರಿ.

42. 14ನೇ ಪ್ರತಿವಾದಿ ಹೆಂಡತಿ ಆ ರೀತಿ ಸಹಿ ಮಡಿದ ಪತ್ರದ ಮೂಲಕ ಓ ಎಸ್ 276/2010 ರಂತೆ ದಾವೆ ಸಲ್ಲಿಸಿದ್ದಾರೆ ಅಂದರೆ ಸರಿ. ಸಾಕ್ಷಿಗೆ ಆ ದಾವೆಯ ಆರ್ಡರ್ ಶೀಟ್, ತಿದ್ದುಪಡಿ ವಾದಪತ್ರ, ಪ್ರತಿವಾದ ಪತ್ರಗಳು ಹಾಗೂ ವಿವಾದಾಂಶಗಳನ್ನು ತೋರಿಸಿದಾಗ ಹೌದು ಎಂದು ನುಡಿದಿರುತ್ತಾರೆ. ಆದ್ದರಿಂದ ಅವುಗಳನ್ನು ಒಟ್ಟಾಗಿ **ನಿಪಿ 88 ಎಂದು ಗುರುತಿಸಲಾಯಿತು.** ಆ ದಾವೆಯಲ್ಲಿ ಹೇಳಿರುವ ಕ್ರಯದ ಕರಾರು ಪತ್ರದ ಪ್ರಕಾರ ಯಾವುದೇ ಹಣ ಸಂದಾಯವಾಗಿಲ್ಲ ಅಂದರೆ ಸರಿ. ಆ ರೀತಿ ಯಾವುದೇ ಕ್ರಯದ ಕರಾರು ಪತ್ರ ಕೂಡಾ ಆಗಿಲ್ಲ ಅಂದರೆ ಸರಿ. ನಾನು ಹೇಳಿದಂತ ಸಹಿ ಖಾಲಿ ಪತ್ರದ ಆಧಾರದಲ್ಲಿ ಹರೀಶ್ ರವರು ಕ್ರಯದ ಕರಾರು ಪತ್ರ, ಜಿಪಿಎ, ಪುಲ್ ಸೆಟ್ಲಮೆಂಟ್ ಅಗ್ರಿಮೆಂಟ್, ಅಫಡವಿಟ್ ಹಾಗೂ ಇಂಡೆಮ್ನಿಟಿ ಬಾಂಡ್ ಸೃಷ್ಟಿಸಿಕೊಂಡಿದ್ದಾರೆಂದರೆ ಸರಿ. ಅವರು ಆ ರೀತಿ ಸೃಷ್ಟಿಸಿಕೊಂಡ ಆ ಪತ್ರಗಳ ಪ್ರಕಾರ ಯಾವುದೇ ಕ್ರಯದ ಕರಾರು ಆಗಲೀ, ವ್ಯವಹಾರವಾಗಲೀ ಆಗಿಲ್ಲ ಅಂದರೆ ಸರಿ. ಅವರಿಬ್ಬರೂ ವಾದಿಗೆ ಮೋಸ ಮಾಡಬೇಕು ಎಂದು ನಮ್ಮಿಂದ ಆ ರೀತಿ ಪತ್ರಗಳನ್ನು ಸೃಷ್ಟಿಸಿಕೊಂಡಿದ್ದಾರೆಂದರೆ ಸರಿ. ಅವರಿಬ್ಬರೂ ವಾದಿಗೆ ಯಾವ ರೀತಿ ಕೂಡಾ ಸ್ವತುತ ದಕ್ಕಬಾರದು ಎಂದು ಆ ಪತ್ರಗಳನ್ನು ಸೃಷ್ಟಿಸಿಕೊಂಡಿದ್ದಾರೆಂದರೆ ಸರಿ. ನನಗಾಗಲೀ ನನ್ನ ಕುಟುಂಬದವರಿಗಾಗಲೀ ಆ ರೀತಿಯ ಪತ್ರಗಳನ್ನು ಅವರಿಬ್ಬರಿಗೆ ಬರೆದುಕೊಡಲು ಸಂಪೂರ್ಣ ಹಕ್ಕು ಇರಲಿಲ್ಲ ಅಂದರೆ ಸರಿ. ಅವರಿಬ್ಬರನ್ನು ಹಾಗೂ 4ನೇ ಪ್ರತಿವಾದಿಯನ್ನು ನಂಬಿ ನಾವು ಮೋಸ ಹೋಗಿದ್ದೇವೆ ಅಂದರೆ ಸರಿ. ಈ ದಾವೆ ಡಿಕ್ರಿ ಆದರೆ

ನನಗೆ ತೊಂದರೆ ಇಲ್ಲ ಅಂದರೆ ಸರಿ.

ಮರು ವಿಚಾರಣೆ ಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**